


## SMS SMS SMS SMS SMS SMS

ಯಾರದ್ದಾದರೂ ಬುದ್ಧಿವಂತಿಕೆಯ ಮಟ್ಟ ಅಳೆಯಲು, ಅವರನ್ನು ಹಸುವಿನ ಎದುರು ನಿಲ್ಲಿಸು. ಹಸು ದೂರ ಹೋದರೆ ತಲೆಯಲ್ಲಿ ಗೊಬ್ಬರ ಇದೆ ಅಂತ ತಿಳಿದುಕೊ; ಹಸು ಹತ್ತಿರ ಬಂದರೆ ಅವರ ತಲೆಯಲ್ಲಿರೋದು ಬೂಸಾ; ಹಸು ನಿಂತಲ್ಲೆ ನಿಂತಿದ್ದರೆ ತಲೆ ಖಾಲಿ!

***

ಸಂತಾ: ಯಾಕೆ ಬೇಜಾರಲ್ಲಿದ್ದೀಯಾ?

ಬಂತಾ: ನಾನು ಒಬ್ಬನಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳಲಿಕ್ಕೆ ಸಾಲ ಕೊಟ್ಟಿದ್ದೆ ಮಾರಾಯ. ಈಗ ದುಡ್ಡು ವಾಪಸ್ಸು ಬರ್ತಾ ಇಲ್ಲ.

ಸಂತಾ ಯಾಕೆ?

ಬಂತಾ: ಯಾರ್ಹತ್ರ ಕೇಳೋದು ಅಂತಾನೆ ಗೊತ್ತಾಗ್ತ ಇಲ್ಲ... ಆತನ ಮುಖಾನೇ ಬದಲಾಗಿದೆ.

***

ಪ್ರೇಮಿ ಕನವರಿಸುತ್ತಿದ್ದ
ದಿನವೆಲ್ಲ ಸುಖವಿಲ್ಲ, ರಾತ್ರಿಯೆಲ್ಲ ನಿದ್ದೆಯಿಲ್ಲ
ಮನಸ್ಸಿನ ನೆಮ್ಮದಿಯಂತೂ ಇಲ್ಲವೇ ಇಲ್ಲ
ಮೈಕೈ ಎಲ್ಲಾ ಒಂಥರಾ ನೋವು ಬಿಸಿಬಿಸಿ
ಅಯ್ಯೋ ದೇವರೇ ಪ್ರೀತಿ ಅಂದ್ರೆ ಇದೇನಾ?
ದೇವರು ಹೇಳಿದ: ಅಲ್ಲ ಮಗಾ ಇದು ಚಿಕೂನ್ ಗುನ್ಯಾ ಅಥವಾ ಹಂದಿಜ್ವರ!

***

ಜಾಂಡೀಸ್ ರೋಗಿ ಗುನಗುನಿಸುವ ಹಾಡು ಯಾವುದು?

ಗಗನವು yellow ಭೂಮಿಯು yellow!

ಭಕ್ತ ಶಿವನನ್ನು ಕುರಿತು ಘೋರ ತಪಸ್ಸನ್ನು ಮಾಡಿದ. ಇದು ಕಲಿಯುಗ ಅನ್ನುವುದನ್ನು ಮರೆತು ಶಿವ ಪ್ರತ್ಯಕ್ಷನಾಗಿ ಕೇಳಿದ "ನಿನ್ನ ಭಕ್ತಿಗೆ ಮೆಚ್ಚಿದ್ದೇನೆ ಕೇಳು ಏನು ವರ ಬೇಕು?"

ಭಕ್ತ ಕೋಪದಿಂದ ಅರಚಿದ "ನೀನೇಕೆ ಬಂದೆ? ತೊಲಗಾಚೆ, ತಪೋಭಂಗ ಮಾಡಲು ಮೊದಲು ಮೇನಕೆಯನ್ನು ಕಳಿಸು!"

***

ಜೀವನದ ಮೂರು ಮೂರ್ಖ ಹಂತಗಳು;

ಹದಿಹರೆಯ: ಶಕ್ತಿ ಮತ್ತು ಸಮಯವಿರುತ್ತೆ, ಹಣವಿರೋದಿಲ್ಲ

ಹರೆಯ: ಶಕ್ತಿ ಮತ್ತು ಹಣವಿರುತ್ತೆ, ಸಮಯವಿರೋದ್ಲಿಲ

ವೃದ್ಧಾಪ್ಯ: ಸಮಯ ಮತ್ತು ಹಣವಿರುತ್ತೆ, ಶಕ್ತಿ ಇರೋದಿಲ್ಲ!

***

ಅಪ್ಪ: ಬುದ್ಧಿವಂತರು ಮೂರ್ಖರ ಪ್ರಶ್ನೆಗಳಿಗೆ ಎಂದೂ ಉತ್ತರಿಸಲಾರರು.

ಮಗ: ಅದಕ್ಕೇ ನಾನು ಪರೀಕ್ಷೆಯಲ್ಲಿ ಯಾವಾಗಲೂ ಫೇಲಾಗುವುದು.

***

ರಬ್ಬರ್ ಎಳೆದಷ್ಟೂ ಉದ್ದವಾಗುತ್ತೆ; ಪೇಪರ್ ಎಳೆದರೆ ಹರಿದು ಹೋಗುತ್ತೆ; ಹಾಗಾದ್ರೆ ಎಳೆದಷ್ಟೂ ಗಿಡ್ಡವಾಗೋದು?

ಬೀಡಿ!

***

ಪ್ರೀತಿ ಇರೋ ಕಡೆ ಸ್ನೇಹ ಇರೋಲ್ಲ; ಸ್ನೇಹ ಇರೋ ಕಡೆ ಪ್ರೀತಿ ಇರೋಲ್ಲ ಯಾಕೆ ಹೇಳಿ?

ಯಾಕೇಂದ್ರೆ ಇಬ್ಬರೂ ಬೇರೆ ಬೇರೆ ಕಾಲೇಜ್ ಹುಡುಗೀರು!

(ಸಂಗ್ರಹ)

■ ನಡಹಳ್ಳಿ ವಸಂತ್